2) ಲಾಲ್‌ಬಾಗ್ ಎಲ್ಲಾ ಪ್ರವೇಶ ದ್ವಾರಗಳಿಗೆ ಮೆ : ಸೈನಿಕ್ ಟ್ರೇ ಫಾರ್ಮಿಂಗ್ ಅಂಡ್ ವೆಲ್‌ಫೇರ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಕಾವಲು ಸಿಬ್ಬಂದಿ ನೇಮಿಸಲಾಗಿದೆ.

3) ಲಾಲ್‌ಬಾಗ್ ಉದ್ಯಾನವನದಲ್ಲಿ ಪೋಲೀಸ್ ಇಲಾಖೆ ವತಿಯಿಂದ ಪೋಲೀಸ್ ಗಸ್ತು ಏರ್ಪಡಿಸಲಾಗಿದೆ. ಹಾಗೂ ಹೊಯ್ಸಳ ವಾಹನ ಆಗಾಗ್ಗೆ ಗಸ್ತು ತಿರುಗುತ್ತಿದೆ.

ಈ) ಲಾಲ್‌ಬಾಗ್ ಉದ್ಯಾನವನದ ಪೂರ್ವ ದ್ವಾರದ ಬಳಿ ಕೆಂಗಲ್ ಹನುಮಂತಯ್ಯ ರಸ್ತೆಯ ತುದಿಗೆ ಹೊಂದಿಕೊಂಡಂತೆ ಡಾ|| ಎಂ.ಎಚ್ ಮರಿಗೌಡ ಸ್ವರ್ಣ ಭವನದ ಮುಂಭಾಗದಲ್ಲಿರುವ ಖಾಲಿ ಪ್ರದೇಶದಲ್ಲಿ ಸಾರ್ವಜನಿಕರ ವಾಹನ ನಿಲ್ದಾಣಕ್ಕೆ ವ್ಯವಸ್ಥೆ ಮಾಡಲಾಗಿದೆ.

ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಸ್ ನಿಲ್ದಾಣಗಳು

533 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ನಗರ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣಗಳನ್ನು ಅಭಿವೃದ್ಧಿಗೊಳಿಸಲು ಹಾಗೂ ಈ ಕ್ಷೇತ್ರದಲ್ಲಿ ಬಸ್ ಷೆಲ್ಟರ್ಸ್‌ಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

1. ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಜಯನಗರ 4ನೇ ಬ್ಲಾಕ್‌ನಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದೆ. ಈ ಬಸ್ ನಿಲ್ದಾಣದ ವಿಸ್ತರಣೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಹೆಚ್ಚಿನ ಸ್ಥಳವನ್ನು ಪಡೆದು ಅಭಿವೃದ್ಧಿಗೊಳಿಸಲಾಗುವುದು.

ಈ ವಿಧಾನ ಸಭಾ ಕ್ಷೇತ್ರಹಲ್ಲಿ ಒಟ್ಟು 102 ಬಸ್ ಷೆಲ್ಟರ್‌ಗಳಿರುತ್ತವೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಂದೇ ಮಾದರಿಯ ಬಸ್ ಷೆಲ್ಟರ್‌ಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ನಿರ್ಮಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪ್ರವೇಶ ಶುಲ್ಕ

534 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನಕ್ಕೆ ಪ್ರವೇಶ ಶುಲ್ಕವನ್ನು ವಿಧಿಸಲಾಗಿದೆಯೇ

ಆ) ಹಾಗಿದ್ದಲ್ಲಿ ದೊಡ್ಡವರಿಗೆ ಹಾಗೂ ಮಕ್ಕಳಿಗೆ ವಿಧಿಸಲಾದ ಪ್ರವೇಶ ಶುಲ್ಕ ಎಷ್ಟು?

ಇ) ಇದರಿಂದ ಪ್ರತಿ ತಿಂಗಳು ಬರತಕ್ಕ ವರಮಾನವೆಷ್ಟು?

ಈ) ಈ ವರಮಾನವನ್ನು ಲಾಲ್‌ಬಾಗ್‌ಉದ್ಯಾನವನದ ಅಭಿವೃದ್ಧಿಗಾಗಿ ಹೆಚ್ಚುವರಿ ಹಣವೆಂದು ಪರಿಗಣಿಸಿ, ಉಪಯೋಗಿಸಲಾಗುವುದೇ?

ಉ) ಈ ರೀತಿ ಪ್ರವೇಶ ಶುಲ್ಕವನ್ನು ಬೇರೆ ಯಾವ ಉದ್ಯಾನವನಕ್ಕೆ ವಿಧಿಸಲಾಗಿದೆ?

ಊ) ಕೇವಲ ಲಾಲ್‌ಬಾಗ್‌ಗೆ ಪ್ರವೇಶ ಶುಲ್ಕ ವಿಧಿಸಲು ಕಾರಣಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು.) :

ಅ) ಹೌದು.

ಆ) ಲಾಲ್‌ಬಾಗ್ ಸಸ್ಯೋದ್ಯಾನಕ್ಕೆ ಬರುವ ಪ್ರವಾಸಿಗರಿಗೆ 12 ವರ್ಷಕ್ಕಿಂತ ಮೇಲ್ಪಟ್ಟವರಿಗೆ ರೂ.2-00ರಂತೆ ಪ್ರವೇಶ ಶುಲ್ಕ ವಿಧಿಸಲಾಗುತ್ತಿದೆ. ಪ್ರಾಥಮಿಕ ಶಾಲಾ ಮಕ್ಕಳಿಗೆ ಹಾಗೂ ಅಂಗವಿಕಲರಿಗೆ ಉಚಿತ ಪ್ರವೇಶ ನೀಡಲಾಗುತ್ತಿದೆ.

ಇ) ಪ್ರತಿ ತಿಂಗಳು ಸರಾಸರಿ ರೂ. 2.84 ಲಕ್ಷ ನಿವ್ವಳ ಆದಾಯ ಬರುತ್ತಿದೆ.

ಈ) ಹೌದು.

ಉ) ಈ ರೀತಿಯ ಪ್ರವೇಶ ಶುಲ್ಕವನ್ನು ಕೆ.ಆರ್.ಎಸ್. ಬೃಂದಾವನ ಗಾರ್ಡನ್ ಹಾಗೂ ನಂಧಿ ಗಿರಿದಾಮಗಳಲ್ಲಿ ವಿಧಿಸಲಾಗುತ್ತಿದೆ.

ಊ) ಲಾಲ್‌ಬಾಗ್ ಸಸ್ಯತೋಟವು ಪ್ರಸಿದ್ಧ ಸಸ್ಯೋದ್ಯಾನ (ಬಟಾನಿಕಲ್ ಗಾರ್ಡನ್) ವಾಗಿದ್ದು ಇದರ ವಿಸ್ತೀರ್ಣ 240 ಎಕರೆ ಇರುತ್ತದೆ. ಈ ಉದ್ಯಾನವನದ ಹೆಚ್ಚಿನ ಅಭಿವೃದ್ಧಿ ಹಾಗೂ ನಿರ್ವಹಣೆ ಕೆಲಸಗಳಿಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇರುವುದರಿಂದ ಲಾಲ್‌ಬಾಗ್ ಉದ್ಯಾನವನಕ್ಕೆ ಪ್ರವೇಶ ಶುಲ್ಕ ವಿಧಿಸಲಾಗುತ್ತಿದೆ.

ತೋಟಗಾರಿಕೆ ಇಲಾಖೆಯಲ್ಲಿ ನಕಲಿ ದಾಖಲೆಗಳ ಪ್ರಕರಣ

535 - ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) : ಮಾನ್ಯ ತೋಟಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಇಲಾಖೆಗೆ ಸುಳ್ಳು ಮಾಹಿತಿಯನ್ನು ನೀಡಿ ಹಾಗೂ ನಕಲಿ ದಾಖಲೆಗಳನ್ನು ಸೃಷ್ಟಿಸಿ ಲಕ್ಷಾಂತರ ರೂ.ಗಳ ಸಹಾಯ ಧನವನ್ನು ಪಡೆದು ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಂಚನೆ ಪ್ರಕರಣದಲ್ಲಿ ಭಾಗಿಯಾಗಿರುವ ಸಂಸ್ಥೆಗಳು ಯಾವುವು? ಅವುಗಳ ಮಾಲೀಕರು ಯಾರು?